

ಅರುಣ ಪಿ. ಭಟ್ಟ


## ವಾರಭವಿಷ್ಯ 11.2.2021ರಿಂದ 17.2.2021ರವರೆಗೆ




ವಾರದ ಶುರುವಿನಲ್ಲಿ ಉತ್ತಮವಾದ ಹಣದ ಹರಿವು ಇರುತ್ತದೆ. ವರ್ಚಸ್ಸು ವೃದ್ಧಿ ಆಗಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಪ್ರಗತಿ ವಾರದ ಮಧ್ಯದಲ್ಲಿ ಹೆಚ್ಚಿನ ಹಣ ಖರ್ಚಾಗಲಿದೆ. ಇದರಿಂದ ಆತಂಕಕ್ಕೆ ಗುರಿಯಾಗುತ್ತೀರಿ. ಶತ್ರುಗಳ ಉಪಟಳ ಹೆಚ್ಚಾಗಲಿದೆ. ಇದರಿಂದ ಮಾನಸಿಕ ಆತಂಕಕ್ಕೆ ಗುರಿಯಾಗುತ್ತೀರಿ. ತಲೆ ಮತ್ತು ಹಲ್ಲು ನೋವು ಕಾಣಿಸಿಕೊಳ್ಳಬಹುದು. ಶುಭದಿನ **15.** ಶ್ರೀರಾಜರಾಜೇಶ್ವರಿ ಜಪ ಮಾಡಿರಿ.




ವಾರದ ಆರಂಭದಲ್ಲಿ ಉದ್ಯೋಗ ಸ್ಥಳದಲ್ಲಿ ಏಳ್ಗೆ ಇದೆ. ನಿಮ್ಮ ಆರೋಗ್ಯ ಉತ್ತಮವಾಗಿ ಇರಲಿದೆ. ಎಂಥ ಬಿಡುವಿಲ್ಲದ ಕೆಲಸದ ಮಧ್ಯೆಯೂ ಸಂಗಾತಿ ಮಕ್ಕಳ ಜತೆಗೆ ಸಮಯ ಕಳೆಯಲಿದ್ದೀರಿ. ವಾರದ ಮಧ್ಯ ಭಾಗದಲ್ಲಿ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಿನ ಅನುಕೂಲ ನಿಮಗೆ ಒದಗಿಬರಲಿದೆ. ವೈವಾಹಿಕ ಜೀವನ ಸಂತೃಪ್ತಿಯಿಂದ ಇರುತ್ತದೆ. ಶುಭದಿನ **12.** ಶ್ರೀರಾಮರಕ್ಷಾಸ್ತೋತ್ರ ಪಠಿಸಿರಿ.





ವಾರದ ಆರಂಭದಲ್ಲೇ ಮನೆಯಲ್ಲಿ ದೇವತಾ ಆರಾಧನೆ ಕಾರ್ಯಕ್ರಮದ ಸಾಧ್ಯತೆ ಇದೆ. ಸಹೋದರರು ಸಹ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಇನ್ನು ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಅಗತ್ಯ ಇರುವವರಿಗೆ ನೆರವು ಕೂಡ ನೀಡಲಿದ್ದೀರಿ. ಆದಾಯದಲ್ಲಿ ಹೆಚ್ಚಳ ಆಗುವ ಸಾಧ್ಯತೆ ಇದೆ. ಮನೆಯ ವಿಚಾರದಲ್ಲಿ ಗಮನಹರಿಸಬೇಕಾದ ಅಗತ್ಯ ಕಂಡು ಬರುತ್ತದೆ. ಶುಭದಿನ **11.** ಸೌಂದರ್ಯ ಲಹರಿ ಪಠಿಸಿರಿ.





ಉದ್ಯೋಗಕ್ಕೆ ಹೊರತಾದ ಕೆಲಸಗಳನ್ನು ವಾರದ ಶುರುವಿನಲ್ಲಿ ಸಮಯ ನೀಡಬೇಕಾಗುತ್ತದೆ. ವಿದೇಶ ವ್ಯವಹಾರ, ಹಣ ಹೂಡಿಕೆಯಲ್ಲಿ ಉತ್ತಮ ಪ್ರಗತಿ ಇದೆ. ಈ ಅವಧಿಯಲ್ಲಿ ಹೆಚ್ಚು ಹಣ ಖರ್ಚಾಗುತ್ತದೆ. ಉದ್ಯೋಗ ಸ್ಥಳದಲ್ಲಿ ಅಂದುಕೊಂಡ ಸ್ಥಾನಮಾನ ಪಡೆಯಲು ವಾರದ ಮಧ್ಯಭಾಗದಲ್ಲಿ ಅವಕಾಶ ದೊರೆಯುತ್ತದೆ. ಇದಕ್ಕಾಗಿ ಹೆಚ್ಚಿನ ಶ್ರಮ ವಹಿಸಬೇಕಾಗುತ್ತದೆ. ಶುಭದಿನ **14.** ಲಿಂಗಾಷ್ಟಕ ಪಠಿಸಿರಿ




ದಾಂಪತ್ಯ ಜೀವನ ಸಂತೋಷವಾಗಿ ಇರುತ್ತದೆ. ಸಂಬಂಧದಲ್ಲಿ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ವ್ಯಾಪಾರಿಗಳು ಬಹುಕಾಲದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದ್ದೀರಿ. ಇದರಿಂದ ಭವಿಷ್ಯದಲ್ಲಿ ದೊಡ್ಡ ಮಟ್ಟದ ಉಪಯೋಗ ಆಗಲಿದೆ. ವಾರದ ಮಧ್ಯ ಭಾಗದಲ್ಲಿ ಪ್ರವಾಸಕ್ಕೆ ತೆರಳುವ ಸಾಧ್ಯತೆ ಇದೆ. ಆದರೆ ಆರೋಗ್ಯದಲ್ಲಿ ಏರುಪೇರಾಗಬಹುದು ಎಚ್ಚರ. ಶುಭದಿನ **13.** ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.





ವಾರದ ಶುರುವಿನಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಬಹಳ ಶ್ರಮ ಪಡುತ್ತೀರಿ. ಕೆಲಸಗಳು ಆಗಲಿಲ್ಲ ಅಂದರೂ ನಿಮ್ಮ ಆತ್ಮವಿಶ್ವಾಸದಲ್ಲಿ ಯಾವುದೇ ಕುಂದುಂಟಾಗುವುದಿಲ್ಲ. ಪರಿಚಯಸ್ಥರ ಆಹ್ವಾನದ ಮೇರೆಗೆ ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದೀರಿ. ಮನೆಗೆ ಅಗತ್ಯ ಇರುವ ವಸ್ತುಗಳ ಖರೀದಿಗೆ ಹೆಚ್ಚಿನ ಹಣ ವ್ಯಯ ಮಾಡಲಿದ್ದೀರಿ. ತಾಳ್ಮೆ ಇರಲಿ. ಶುಭದಿನ **17.** ವಿಷ್ಣು ಸಹಸ್ರನಾಮ ಪಠಿಸಿರಿ.





ಹಣಕಾಸಿನ ಹರಿವು ಹೆಚ್ಚಾಗಲಿದೆ. ಸಾಮಾಜಿಕ ಸ್ಥಾನಮಾನ ಕೂಡ ಹೆಚ್ಚಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮವಾದ ಏಳ್ಗೆ ಇದೆ. ತಾಂತ್ರಿಕ ಕೌಶಲ, ಜ್ಞಾನ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ದೊರೆಯಲಿದೆ. ಮಗ ಅಥವಾ ಮಗಳ ಪ್ರಗತಿಯಿಂದ ಹೆಮ್ಮೆ, ಸಂತೋಷ ಮೂಡುತ್ತದೆ. ವೈವಾಹಿಕ ಜೀವನದಲ್ಲಿ ಸಂತೋಷ ಇರುತ್ತದೆ. ಶುಭದಿನ **16.** ಶ್ರೀಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ವಾರದ ಆರಂಭದಲ್ಲಿ ನಿಮ್ಮ ಮೇಲೆ ಒತ್ತಡ ಬರಲಿದೆ. ನಿಮ್ಮ ಪಾಲಿನ ಕೆಲಸಗಳನ್ನು ವೇಗವಾಗಿ ಪೂರ್ಣಗೊಳಿಸುವಿರಿ. ಮೊದಲ ಮೂರು ದಿನ ಆರೋಗ್ಯವು ಉತ್ತಮವಾಗಿರುತ್ತದೆ. ವಾರಾಂತ್ಯಕ್ಕೆ ಪೂರ್ವಭಾವಿಯಾಗಿ ಸಾಮಾಜಿಕ ಜೀವನದಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಸಂಗಾತಿಗೆ ಉಡುಗೊರೆ ನೀಡುವ ಬಗ್ಗೆ ಆಲೋಚನೆ ಮಾಡುತ್ತೀರಿ. ಶುಭದಿನ **14.** ಹನುಮಾನ್ ಚಾಲಿಸ್ ಪಠಿಸಿರಿ.





ವಾರದ ಶುರುವಿನಲ್ಲಿ ಪ್ರಗತಿ ಇದೆ. ಉದ್ಯಮ ವಲಯದಲ್ಲಿ ಇರುವವರಿಗೆ ಪ್ರಗತಿ. ಈ ಅವಧಿಯಲ್ಲಿ ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ವಾರದ ಮಧ್ಯ ಭಾಗದಲ್ಲಿ ಉದ್ಯೋಗ ವ್ಯಾಪಾರ ವಿಚಾರಗಳು ಪ್ರಾಶಸ್ತ್ಯ ಪಡೆಯುತ್ತವೆ. ಇನ್ನು ಇದೇ ಸಮಯದಲ್ಲಿ ಉಸಿರಾಟದ ಸಮಸ್ಯೆ ಹಾಗೂ ರಕ್ತಕ್ಕೆ ಸಂಬಂಧಿಸಿದ ತೊಂದರೆ ಕಾಣಿಸಬಹುದು. ಶುಭದಿನ **14.** ಆದಿತ್ಯ ಹೃದಯ ಪಠಿಸಿರಿ.




ಹಿಂದೆಂದಿಗಿಂತ ಹೆಚ್ಚು ಸ್ಪರ್ಧಾತ್ಮಕವಾಗಿ ಇರುತ್ತೀರಿ. ಆದರೆ ಬಹಳ ಶ್ರಮಪಟ್ಟು, ಯಶಸ್ಸು ಪಡೆಯಬೇಕಾಗುತ್ತದೆ. ಸಂವಹನದ ಕೊರತೆ ಎದ್ದು ಕಾಣಲಿದೆ. ಇನ್ನು ವ್ಯಾಪಾರಿಗಳು ಉದ್ಯಮಿಗಳಿಗೆ ಹಲವು ಬಗೆಯಲ್ಲಿ ಸವಾಲುಗಳು ಎದುರಾಗಲಿವೆ. ಈ ಅವಧಿಯಲ್ಲಿ ಹೆಚ್ಚು ಹಣ ಖರ್ಚು ಮಾಡಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳಲಿದೆ. ಶುಭದಿನ **16.** ಕಾಲಭೈರವನ ಆರಾಧನೆ ಮಾಡಿರಿ.




ನಿಮ್ಮ ಜವಾಬ್ದಾರಿಯನ್ನು ಪೂರೈಸುವುದಕ್ಕಾಗಿ ಹೆಚ್ಚು ಸಮಯವನ್ನು ಮೀಸಲಿಡಬೇಕಾಗುತ್ತದೆ. ನಿಮ್ಮ ನಡವಳಿಕೆಯಿಂದ ಸಹೋದ್ಯೋಗಿಗಳು ಬಹಳ ಹೆಮ್ಮೆಪಡುತ್ತಾರೆ. ನಿಮ್ಮ ಸಾಮಾಜಿಕ ಸ್ಥಾನಮಾನದಲ್ಲಿ ಹೆಚ್ಚಳ ಆಗಲಿದೆ. ಜವಾಬ್ದಾರಿಗಳು ಕೂಡ ಜಾಸ್ತಿ ಆಗಲಿದೆ. ನೀವು ಹಾಕಿದ ಶ್ರಮಕ್ಕೆ ತಕ್ಕ ಫಲಿತ ದೊರೆಯುವುದೇ ಎಂದು ಇತರರ ಜತೆಗೂಡಿ ನಿರೀಕ್ಷೆ ಮಾಡಲಿದ್ದೀರಿ. ಶುಭದಿನ **15.** ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಭವಿಷ್ಯದ ಬಗ್ಗೆ ನಿರ್ಧಾರ ಮಾಡುವ ಸಲುವಾಗಿ ವಾರದ ಶುರುವಿನಲ್ಲಿ ಹೆಚ್ಚಿನ ಸಮಯ ನೀಡುತ್ತೀರಿ. ದೂರ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾಗುತ್ತದೆ. ನಿಮ್ಮ ಪ್ರಯತ್ನಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಗಮನ ನೀಡುತ್ತೀರಿ. ದೈಹಿಕ ಆರೋಗ್ಯ ಬಾಧೆಗಳು ಈ ಅವಧಿಯಲ್ಲಿ ನಿಮ್ಮ ಕಾಡಲಿದೆ. ಕಡ್ಡಾಯವಾಗಿ ವೈದ್ಯರನ್ನು ಭೇಟಿ ಮಾಡಿ, ಸಲಹೆ ಪಡೆದುಕೊಳ್ಳಿ. ಶುಭದಿನ **12.** ದತ್ತಗುರು ಚರಿತ್ರೆ ಪಠಿಸಿರಿ.